4007/5055/6019/7019

# II Semester 3 Years LL.B./IV Semester 5 Years B.A.LL.B. (Maj.-Min. System)/B.B.A.LL.B./B.Com.LL.B. Examination, January/February 2025 (Odd Sem.)
# CONSTITUTIONAL LAW – II

Duration : 3 Hours | Max. Marks : 80

**Instructions :** 1. **Answer all five Units.**

2. **One essay type question and one short note/problem is compulsory from each Unit.**
3. **Figures to the right indicate marks.**
4. **Answer should be written either in English or Kannada completely.**

## UNIT – I

Q. No. 1. a) Explain briefly the 73rd and 74th Constitutional Amendments relating to decentralization of powers. Marks : 10

ಅಧಿಕಾರ ವಿಕೇಂದ್ರೀಕರಣಕ್ಕೆ ಸಂಬಂಧಿಸಿದಂತೆ ಸಂವಿಧಾನದ 73 ಮತ್ತು 74 ನೆಯ ತಿದ್ದುಪಡಿಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿ.

OR/ಅಥವಾ

Q. No. 1. a) Elucidate the Constitutional provisions on Inter-state trade and commerce. Marks : 10

ಸಂವಿಧಾನದಲ್ಲಿನ ಅಂತರ-ರಾಜ್ಯ ವ್ಯಾಪಾರ ಮತ್ತು ವಾಣಿಜ್ಯ ವ್ಯವಹಾರಗಳಿಗಿರುವ ಉಪಬಂಧಗಳನ್ನು ವಿಶದೀಕರಿಸಿರಿ.

Q. No. 1. b) Write a note on 'The Administrative relations between the Centre and the States'. Marks : 6

'ಕೇಂದ್ರ ಮತ್ತು ರಾಜ್ಯಗಳ ನಡುವಿನ ಆಡಳಿತಾತ್ಮಕ ಸಂಬಂಧಗಳನ್ನು' ಕುರಿತು ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 1. b) Write a note on 'Doctrine of Territorial Nexus'. Marks : 6

'ಪ್ರಾದೇಶಿಕ ಸಂಬಂಧ ತತ್ವ'ದ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

P.T.O.

Scanned with OKEN Scanner

UNIT – II

Q. No. 2. a) Discuss the Constitutional position of President of India. Marks : 10

ಭಾರತದ ರಾಷ್ಟ್ರಪತಿಯವರ ಸಾಂವಿಧಾನಿಕ ಸ್ಥಾನಮಾನವನ್ನು ಕುರಿತು ಚರ್ಚಿಸಿರಿ.

OR/ಅಥವಾ

Q. No. 2. a) What is a money bill ? Explain the differences between money bill and ordinary bill. Marks : 10

ಧನ ವಿಧೇಯಕ ಎಂದರೇನು ? ಸಾಮಾನ್ಯ ವಿಧೇಯಕ ಹಾಗೂ ಧನ ವಿಧೇಯಕಗಳಿಗಿರುವ ವ್ಯತ್ಯಾಸವನ್ನು ವಿವರಿಸಿ.

Q. No. 2. b) The President of India issues a proclamation dissolving the assemblies in certain states and orders re-election. Some of the ministers thrown-out of office on account of this proclamation challenges the validity of the President's order. They contend that only the respective Governors of the states concerned have the power to dissolve the state assemblies. Decide. Marks : 6

ಭಾರತದ ಕೆಲವು ರಾಜ್ಯಗಳ ವಿಧಾನಸಭೆಗಳನ್ನು ವಿಸರ್ಜಿಸಿ ಅಲ್ಲಿ ಮರುಚುನಾವಣೆಗಾಗಿ ರಾಷ್ಟ್ರಪತಿಯು ಉದ್ಘೋಷಣೆಯನ್ನು ಹೊರಡಿಸಿದ್ದಾರೆ. ಈ ಉದ್ಘೋಷಣೆಯ ಪರಿಣಾಮವಾಗಿ ತಮ್ಮ ಅಧಿಕಾರವನ್ನು ಕಳೆದುಕೊಂಡಿರುವ ಕೆಲವು ಮಂತ್ರಿಗಳು ರಾಷ್ಟ್ರಪತಿಗಳ ಈ ಕ್ರಮದ ಸಿಂಧುತ್ವವನ್ನು ಪ್ರಶ್ನಿಸಿದ್ದಾರೆ. ಇವರು, ಸಂಬಂಧಪಟ್ಟ ರಾಜ್ಯಗಳ ರಾಜ್ಯಪಾಲರಿಗೆ ಮಾತ್ರ ರಾಜ್ಯಗಳ ವಿಧಾನಸಭೆಯನ್ನು ವಿಸರ್ಜನೆ ಮಾಡುವ ಅಧಿಕಾರ ಇದೆಯೆಂದು ತಮ್ಮ ವಾದವನ್ನು ಮಂಡಿಸಿದ್ದಾರೆ. ನಿರ್ಧರಿಸಿ.

OR/ಅಥವಾ

Q. No. 2. b) Can a member of a Parliament raise a discussion as to the conduct of a judge of the Supreme Court or a High Court ? Answer with reference to decided cases. Marks : 6

ಸರ್ವೋಚ್ಚ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯದ ನ್ಯಾಯಾಧೀಶರೊಬ್ಬರ ವೈಯಕ್ತಿಕ ನಡತೆಯ ಕುರಿತು ಚರ್ಚೆಯನ್ನು ಮಂಡಿಸಲು ಸಂಸದೀಯ ಸದಸ್ಯನಿಗೆ ಹಕ್ಕಿದೆಯೇ ? ತೀರ್ಮಾನಿತ ಪ್ರಕರಣಗಳನ್ನು ಉಲ್ಲೇಖಿಸಿ, ಉತ್ತರಿಸಿ.

Scanned with OKEN Scanner

## UNIT – III

Q. No. 3. a) Explain briefly the different kinds of jurisdiction exercised by the Supreme Court of India. Marks : 10

ಭಾರತದ ಸರ್ವೋಚ್ಚ ನ್ಯಾಯಾಲಯವು ಹೊಂದಿರುವ ವಿವಿಧ ರೀತಿಯ ನ್ಯಾಯಾಧಿಕಾರವನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿ.

OR/ಅಥವಾ

Q. No. 3. a) Discuss the powers, privileges and immunities of the members of Parliament. Marks : 10

ಸಂಸತ್ತಿನ ಸದಸ್ಯರ ಅಧಿಕಾರ, ಸೌಲಭ್ಯಗಳು ಮತ್ತು ಉನ್ಮುಕ್ತಿಗಳನ್ನು ಕುರಿತು ಚರ್ಚಿಸಿರಿ.

Q. No. 3. b) Write a note on tenure and removal of Supreme Court judges. Marks : 6

ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಅಧಿಕಾರ ಅವಧಿ ಮತ್ತು ತೆಗೆದು ಹಾಕುವಿಕೆ ಕುರಿತು ಟಿಪ್ಪಣಿಯೊಂದನ್ನು ಬರೆಯಿರಿ.

OR/ಅಥವಾ

Q. No. 3. b) Write a note on 'Anti-Defection Law'. Marks : 6

'ಪಕ್ಷಾಂತರ ನಿಷೇಧ ಕಾನೂನು' ಬಗ್ಗೆ ಟಿಪ್ಪಣಿ ಬರೆಯಿರಿ.

## UNIT – IV

Q. No. 4. a) Discuss the liability of the state for tortions acts of its servants. Marks : 10

ತನ್ನ ನೌಕರರ ಅಪಕೃತ್ಯಕ್ಕೆ ರಾಜ್ಯದ ಬಾಧ್ಯತೆಯನ್ನು ಚರ್ಚಿಸಿರಿ.

OR/ಅಥವಾ

Q. No. 4. a) Explain the Constitution, powers and duties of Election Commission. Marks : 10

ಚುನಾವಣಾ ಆಯೋಗದ ರಚನೆ, ಅಧಿಕಾರಗಳು ಮತ್ತು ಕರ್ತವ್ಯಗಳನ್ನು ವಿವರಿಸಿ.

Scanned with OKEN Scanner

Q. No. 4. b) 'A' was appointed on an official capacity to the higher post. After two years of service he was reverted to his original post on the ground of unsatisfactory work. Is it valid ? Marks : 6

'A' ಎಂಬ ಸರಕಾರಿ ನೌಕರನನ್ನು ಬದಲಿ ಕೆಲಸ ನಿರ್ವಹಿಸಲು ಉನ್ನತ ಹುದ್ದೆಯಲ್ಲಿ ನೇಮಿಸಲಾಗಿತ್ತು. ಎರಡು ವರ್ಷಗಳ ನಂತರ ಸಮಾಧಾನಕರ ಕೆಲಸ ನಿರ್ವಹಿಸುತ್ತಿಲ್ಲ ಎಂಬ ಕಾರಣದ ಮೇಲೆ ಅವನನ್ನು ತನ್ನ ಹಿಂದಿನ ಹುದ್ದೆಗೆ ಮರಳಿ ಕಳಿಸಲಾಯಿತು. ಇದು ವಿಧಿಬದ್ಧವೇ ?

OR/ಅಥವಾ

Q. No. 4. b) Write a note on 'Doctrine of Pleasure'. Marks : 6

'ಇಚ್ಛಾ ಸಿದ್ಧಾಂತ'ದ ಮೇಲೆ ಟಿಪ್ಪಣಿ ಬರೆಯಿರಿ.

## UNIT – V

Q. No. 5. a) Discuss the circumstances under which national emergency may be proclaimed ? What are its effects ? Marks : 10

ರಾಷ್ಟ್ರೀಯ ತುರ್ತುಪರಿಸ್ಥಿತಿಯನ್ನು ಯಾವ ಸನ್ನಿವೇಶಗಳಲ್ಲಿ ಘೋಷಿಸಲ್ಪಡಬಹುದೆಂದು ಚರ್ಚಿಸಿ ? ಅದರ ಪರಿಣಾಮಗಳೇನು ?

OR/ಅಥವಾ

Q. No. 5. a) Examine the scope of the power of the Parliament to amend the Indian Constitution under Article 368, in the light of decided cases. Marks : 10

ತೀರ್ಮಾನಿತ ಪ್ರಕರಣಗಳ ಹಿನ್ನೆಲೆಯಲ್ಲಿ ಭಾರತದ ಸಂವಿಧಾನದ 368ನೇ ಅನುಚ್ಛೇದದ ಮೇರೆಗೆ ಸಂಸತ್ತಿಗಿರುವ ಸಂವಿಧಾನ ತಿದ್ದುಪಡಿ ಅಧಿಕಾರ ವ್ಯಾಪ್ತಿಯನ್ನು ಪರಿಶೀಲಿಸಿರಿ.

Q. No. 5. b) Importance of Constituent Assembly Debates in Constitutional interpretation. Marks : 6

ಸಾಂವಿಧಾನಿಕ ಅರ್ಥ ವಿಶ್ಲೇಷಣೆಯಲ್ಲಿ ಸಂವಿಧಾನ ರಚನಾ ಸಭೆಯ ಚರ್ಚೆಯ ಪ್ರಾಮುಖ್ಯತೆ.

OR/ಅಥವಾ

Q. No. 5. b) Effects of financial emergency. Marks : 6

ಆರ್ಥಿಕ ತುರ್ತುಪರಿಸ್ಥಿತಿಯ ಪರಿಣಾಮಗಳು.

---

Scanned with OKEN Scanner